## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಶ್ರೀ ಆರ್.ಎಂ.ಬಾಣದ್, ಹಿಂದಿನ ಉಪಯೋಜನಾ ವ್ಯವಸ್ಥಾಪಕರು, ಜಲ ನಿರ್ಮಲ ಯೋಜನೆ, ಜಿಲ್ಲಾ ಪಂಚಾಯತ್, ಕೊಪ್ಪಳ ಮತ್ತು ಇತರೆ ಇಬ್ಬರ ವಿರುದ್ಧ ದೂರಿಗೆ ಸಂಬಂದಿಸಿದಂತೆ ಮಾನ್ಯ ಉಪಲೋಕಾಯುಕ್ತರ ತನಿಖೆ, ವಿವರವಾದ ಇಲಾಖೆ ವಿಚಾರಣೆಗೆ ಪ್ರಕರಣವನ್ನು ಉಪಲೋಕಾಯುಕ್ತರಿಗೆ ವಹಿಸುವ ಬಗ್ಗೆ-ಆದೇಶ.

**ಓದಲಾಗಿದೆ:**

| | |
|---|---|
| 1. | ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಇವರ ಅ.ಸ.ಪ.ಸಂಖ್ಯೆ: ಕಂಪ್ಲೇಟ್/ ಉಪಲೋಕ್/ಜಿಎಲ್‌ಬಿ-/8024/2015/ ಎಆರ್‌ಇ-3, ದಿನಾಂಕ:28.11.2016. |
| 2. | ಮಾನ್ಯ ಉಪ ಲೋಕಾಯುಕ್ತರವರ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ವರದಿ ಸಂಖ್ಯೆ: ಕಂಪ್ಲೇಟ್/ ಉಪಲೋಕ್/ಜಿಎಲ್‌ಬಿ-/8024/2015/ ಎಆರ್‌ಇ-3, ದಿನಾಂಕ:16.11.2016. |

**ಪ್ರಸ್ತಾವನೆ:-**

ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಛೇರಿ, ಬೆಂಗಳೂರು ರವರು ಮೇಲೆ ಓದಲಾದ ಕ್ರಮ ಸಂಖ್ಯೆ(1) ರ ದಿನಾಂಕ28.11.2016 ರ ಅರೆ ಸರ್ಕಾರಿ ಪತ್ರದ ಜೊತೆ ಮೇಲೆ ಕ್ರಮ ಸಂಖ್ಯೆ(2) ರಲ್ಲಿ ಓದಲಾದ ಮಾನ್ಯ ಉಪ ಲೋಕಯುಕ್ತರವರ ದಿನಾಂಕ:16.11.2016 ರ ಲೋಕಾಯುಕ್ತ ಕಾಯ್ದೆಯ ಕಲಂ 12(3)ರ ವರದಿ ಹಾಗೂ ಇತರೆ ದಾಖಲೆಗಳನ್ನು ಲಗತ್ತಿಸಿ, ಸರ್ಕಾರಕ್ಕೆ ಕಳುಹಿಸಿ ಮಾನ್ಯ ಉಪ ಲೋಕಾಯುಕ್ತರವರ ವರದಿಯನುಸಾರ ಕೂಡಲೇ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ಪರಿಶೀಲಿಸಲಾಗಿ, ಶ್ರೀ ಧರಣಪ್ಪ ತಂದೆ ಪಕೀರವ್ವ ಕಾಳಿ, ಕುದರಿ ಮೋತಿ ಗ್ರಾಮ, ಕೊಪ್ಪಳ ಜಿಲ್ಲೆ ಇವರು ಲೋಕಾಯುಕ್ತ ಕಛೇರಿಗೆ ದೂರನ್ನು ಸಲ್ಲಿಸಿ, ಜಲ ನಿರ್ಮಲ ಯೋಜನೆಯಲ್ಲಿ ಕೈಗೊಳ್ಳಲಾದ ಕಾಮಗಾರಿಗಳನ್ನು ಕಳಪೆಯಾಗಿ ನಿರ್ವಹಿಸಲಾಗಿದೆ ಎಂದು ಇದಕ್ಕೆ ಶ್ರೀ ರಮೇಶ್, ಕಿರಿಯ ಇಂಜಿನಿಯರ್, ಶ್ರೀ ಆರ್.ಎಂ,ಬಾಣದ್, ಹಿಂದಿನ ಉಪಯೋಜನ ವ್ಯವಸ್ಥಾಪಕರು, ಮತ್ತು ಯಮನಪ್ಪ ರಾಮತಾಳ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಇವರುಗಳು ಜವಬ್ದಾರರಾಗಿರುತ್ತಾರೆಂದು ಆರೋಪಿಸಿರುತ್ತಾರೆ.

ಸದರಿ ದೂರಿನ ಕುರಿತು ಲೋಕಾಯುಕ್ತ ಕಛೇರಿಯು ತನಿಖೆ ಕೈಗೊಂಡಿದ್ದು, ಲಭ್ಯವಿರುವ ದಾಖಲೆಗಳು ಹಾಗೂ ಕಾಮಗಾರಿಯ ಛಾಯಾ ಚಿತ್ರವನ್ನು ಪರಿಶೀಲಿಸಿ, ಈ ಮುಂದಿನ ವಿವರಗಳನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಕುದರಿಮೋತಿ ಗ್ರಾಮದಲ್ಲಿ ರಸ್ತೆ ಮತ್ತು ಚರಂಡಿ ಕಾಮಗಾರಿಯನ್ನು ರೂ. 95.00 ಲಕ್ಷ ಅಂದಾಜು ವೆಚ್ಚದಲ್ಲಿ ಕೈಗೆತ್ತಿಕೊಂಡಿದ್ದು, ಅಂತಿಮವಾಗಿ ರೂ.1,12,09,303/- ರೂ ಗಳನ್ನು ಗುತ್ತಿಗೆದಾರರಿಗೆ ಪಾವತಿಸಲಾಗಿದೆಯೆಂದು, ಕಾಮಗಾರಿಯಲ್ಲಿ ಆನೇಕ ನ್ಯೂನತೆಗಳು ಇದ್ದು ಕಾಮಗಾರಿಯನ್ನು ಕಳಪೆಯಾಗಿ ಅವೈಜ್ಞಾನಿಕವಾಗಿ ನಿರ್ವಹಿಸಿರುವುದು ಛಾಯಾ ಚಿತ್ರಗಳಿಂದ ಕಂಡು ಬರುತ್ತದೆಯೆಂದು, ಕಾಂಕ್ರೀಟ್ ರಸ್ತೆಯ ಎರಡು ಕಡೆ ಅಂದಾಜು ಪಟ್ಟಿಯನುಸಾರ ಚರಂಡಿ ನಿರ್ಮಾಣ ಮಾಡದೇ ಇರುವುದು, ಚರಂಡಿಯನ್ನು ಅವೈಜ್ಞಾನಿಕವಾಗಿ ರಸ್ತೆಯ ಮಧ್ಯದಲ್ಲಿ ನಿರ್ಮಿಸಿರುವುದು. ನಿಗಧಿತ ಉದ್ದೇಶಕ್ಕೆ ಮೀಸಲಿರಿಸಿದ ಹಣವನ್ನು ಸೂಕ್ತವಾದ ರೀತಿ ಬಳಸದೇ ದುರ್ಬಳಕೆ ಹಾಗೂ ದುರುಪಯೋಗವಾಗಿದ್ದು, ಇದಕ್ಕೆ ಶ್ರೀ ರಮೇಶ್, ಕಿರಿಯ ಇಂಜಿನಿಯರ್, ಶ್ರೀ ಆರ್.ಎಂ,ಬಾಣದ್, ಹಿಂದಿನ ಉಪಯೋಜನ ವ್ಯವಸ್ಥಾಪಕರು, ಮತ್ತು ಶ್ರೀ ಯಮನಪ್ಪ ರಾಮತಾಳ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಇವರುಗಳು ಕಾರಣರಾಗಿರುತ್ತಾರೆಂದು ವರದಿಯಲ್ಲಿ ತಿಳಿಸಲಾಗಿದೆ.

ಮುಂದುವರಿದು, ಕಾಮಗಾರಿಯಲ್ಲಿ ಕಂಡು ಬಂದ ಲೋಪಗಳನ್ನು ನಮೂದಿಸಿ, ಮೂವರು ಅಪಾದಿತರಿಗೂ ನೋಟಿಸ್ ಜಾರಿ ಮಾಡಿ ಆಕ್ಷೇಪಣೆ ಸಲ್ಲಿಸಲು ತಿಳಿಸಲಾಗಿತ್ತೆಂದು ಶ್ರೀ ಆರ್.ಎಂ.ಬಾಣದ್ ಇವರು ವಿವರಣೆ ಸಲ್ಲಿಸಿ,

---2

ಗ್ರಾಮಸ್ಥರು ಹಾಗೂ ಗ್ರಾಮ ಪಂಚಾಯತ್‌ನವರ ಕೋರಿಕೆಯನುಸಾರ ಕೆಲವೊಂದು ಸಣ್ಣ ಪುಟ್ಟ ಮಾರ್ಪಾಟುಗಳನ್ನು ಮಾಡಿಕೊಂಡು ಕಾಮಗಾರಿ ನಿರ್ವಹಿಸಲಾಗಿದೆಯೆಂದು, ಅದರೂ ಟೆಂಡರ್ ಮೊತ್ತ ಮೀರದಂತೆ ಕೆಲಸ ನಿರ್ವಹಿಸಲಾಗಿದೆ ಎಂದು ತಿಳಿಸಿರುತ್ತಾರೆಂದು, ಇನ್ನುಳಿದ ಇಬ್ಬರು ಯಾವುದೇ ವಿವರಣೆ ಸಲ್ಲಿಸಿರುವುದಿಲ್ಲವೆಂದು, ಶ್ರೀ ಆರ್.ಎಂ.ಬಾಣದ್‌ರವರು ಸಲ್ಲಿಸಿರುವ ವಿವರಣೆಗೆ ಪೂರಕವಾಗುವಂತೆ ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲವೆಂದು, ಕಾಮಗಾರಿಯ ಮೂಲ ಅಂದಾಜು ಪಟ್ಟಿಯಲ್ಲಿ ಸಣ್ಣಪುಟ್ಟ ಮಾರ್ಪಾಟುಗಳನ್ನು ಮಾಡಿಕೊಳ್ಳಬೇಕಾದಲ್ಲಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಅವಶ್ಯವಾಗಿದ್ದು, ಅಂತಹ ಯಾವುದೇ ಅನುಮೋದನೆ ಪಡೆದಿರುವುದು ಕಂಡು ಬರುವುದಿಲ್ಲವೆಂದು, ಆದ್ದರಿಂದ, ಶ್ರೀ ಆರ್.ಎಂ.ಬಾಣದ ಇವರ ವಿವರಣೆಯನ್ನು ಒಪ್ಪುವುದು ಸೂಕ್ತವಾಗುವುದಿಲ್ಲವೆಂದು, ಉಳಿದ ಇಬ್ಬರು ಯಾವುದೇ ವಿವರಣೆ ಸಲ್ಲಿಸದೇ ಇರುವುದರಿಂದ ಅವರ ವಿವರಣೆ ಏನೂ ಇರುವುದಿಲ್ಲವೆಂದು ಪರಿಗಣಿಸಬಹುದಾಗಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಮೂವರ ಆರೋಪಿತರು ಸರ್ಕಾರಿ ನೌಕರರಾಗಿದ್ದು ತಮ್ಮ ಕರ್ತವ್ಯದಲ್ಲಿ ಪೂರ್ಣ ಪ್ರಮಾಣದ ಕರ್ತವ್ಯ ನಿಷ್ಠೆ, ಪ್ರಾಮಾಣಿಕತೆ ತೋರದೆ ಪ್ರಶ್ನಿತ ಕಾಮಗಾರಿಯ ನಿರ್ವಹಣೆಯಲ್ಲಿ ಬೇಜವಾಬ್ದಾರಿತನದಿಂದ ವರ್ತಿಸಿ, ಹಣ ದುರುಪಯೋಗಕ್ಕೆ ಕಾರಣರಾಗಿರುತ್ತಾರೆಂದು, ಈ ರೀತಿಯಾಗಿ ಸದರಿಯವರುಗಳು ಕ.ನಾ.ಸೇ (ನಡತೆ) ನಿಯಮಗಳು 1966 ನಿಯಮ 3(1) ನ್ನು ಉಲಂಘಿಸಿ, ಶಿಸ್ತುಕ್ರಮಕ್ಕೆ ಅರ್ಹರಾಗಿರುತ್ತಾರೆಂದು ಆದ್ದರಿಂದ, ಶ್ರೀ ಆರ್.ಎಂ.ಬಾಣದ್, ಹಿಂದಿನ ಉಪಯೋಜನ ವ್ಯವಸ್ಥಾಪಕರು ಇವರು ದಿನಾಂಕ:31.12.2014 ರಂದು ಸೇವೆಯಿಂದ ನಿವೃತ್ತಿ ಹೊಂದಿರುವುದರಿಂದ ಅವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ ನಿಯಮಗಳು 214 (2) (ಬಿ) ಅನುಸಾರ ಮಂಜೂರಾತಿ ನೀಡಿ, ಸದರಿಯರನ್ನು ಒಳಗೊಂಡಂತೆ ಶ್ರೀ ರಮೇಶ್, ಕಿರಿಯ ಇಂಜಿನಿಯರ್, ಮತ್ತು ಶ್ರೀ ಯಮನಪ್ಪ ರಾಮತಾಳ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಈ ಮೂವರ ವಿರುದ್ಧ ವಿವರವಾದ ಇಲಾಖೆ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ(ವ.ನಿ.ಮೇ) ನಿಯಮಗಳು 1957 ರ ಅನುಸಾರ ನಡೆಸಲು ತಮಗೆ ವಹಿಸುವಂತೆ ಮಾನ್ಯ ಉಪಲೋಕಾಯುಕ್ತರು ಸರ್ಕಾರವನ್ನು ಕೋರಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿ ಹಾಗೂ ಇತರೆ ದಾಖಲೆಗಳನ್ನು ಪರಿಶೀಲಿಸಿರುತ್ತದೆ. ಕಾಮಗಾರಿಗೆ ಸಂಬಂಧಿಸಿದಂತ ಛಾಯಾಚಿತ್ರಗಳನ್ನು ಹಾಗೂ ಶ್ರೀ ಆರ್.ಎಂ.ಬಾಣದ್ ಇವರು ಸಲ್ಲಿಸಿರುವ ವಿವರಣೆಯನ್ನು ಗಮನಿಸಿದಲ್ಲಿ ಪ್ರಶ್ನಿತ ಕಾಮಗಾರಿಯನ್ನು ಅಂದಾಜು ಪಟ್ಟಿಯ ಅನುಸಾರ ನಿರ್ಮಿಸಿರುವುದು ಕಂಡು ಬಂದಿರುವುದಿಲ್ಲ. ಅಪಾದಿತರು ಗ್ರಾಮಸ್ಥರ ಹಾಗೂ ಗ್ರಾಮ ಪಂಚಾಯತ್ ಸದಸ್ಯರ ಕೋರಿಕೆಯನುಸಾರ ಕಾಮಗಾರಿಯಲ್ಲಿ ಸಣ್ಣಪುಟ್ಟ ಬದಲಾವಣೆ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದ್ದರೂ, ಈ ರೀತಿಯ ಬದಲಾವಣೆಗೆ ಸಕ್ಷಮ ಪ್ರಾಧಿಕಾರದ ಅನುಮತಿ ಪಡೆದಿರುವುದು ಕಂಡು ಬರುವುದಿಲ್ಲ. ಆದ್ದರಿಂದ ಮಾನ್ಯ ಉಪಲೋಕಾಯುಕ್ತರ ವರದಿಯಲ್ಲಿ ತಿಳಿಸಿರುವ ಕಾಮಗಾರಿಯಲ್ಲಿ ಸಾಕಷ್ಟು ನ್ಯೂನತೆಗಳು ಕಂಡು ಬಂದಿರುತ್ತದೆ. ಸದರಿ ಕಾಮಗಾರಿಯ ಉಸ್ತುವಾರಿಯನ್ನು ವಹಿಸಿದ್ದ ಶ್ರೀ ರಮೇಶ್, ಕಿರಿಯ ಇಂಜಿನಿಯರ್, ಶ್ರೀ ಆರ್.ಎಂ,ಬಾಣದ್, ಹಿಂದಿನ ಉಪಯೋಜನ ವ್ಯವಸ್ಥಾಪಕರು, ಮತ್ತು ಶ್ರೀ ಯಮನಪ್ಪ ರಾಮತಾಳ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಇವರುಗಳು ಸರ್ಕಾರಿ ನೌಕರರಾಗಿದ್ದು, ಆರೋಪದಲ್ಲಿ ತಿಳಿಸಿರುವ ಕಾಮಗಾರಿಯ ನಿರ್ವಹಣೆಯಲ್ಲಿ ಪೂರ್ಣ ಪ್ರಮಾಣದ ಪ್ರಾಮಾಣಿಕತೆ, ಕರ್ತವ್ಯ ನಿಷ್ಠೆ, ತೋರದೆ ಸರ್ಕಾರಿ ನೌಕರರಿಗೆ ತರವಲ್ಲದ ರೀತಿ ವರ್ತಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ಆದ್ದರಿಂದ ಮೇಲ್ಕಂಡ ಮೂವರು ಅಧಿಕಾರಿ/ನೌಕರರ ವಿರುದ್ಧ ವಿವರವಾದ ಇಲಾಖೆ ವಿಚಾರಣೆಯನ್ನು ನಡೆಸುವುದು ಸೂಕ್ತವೆಂದು ಸರ್ಕಾರವು ನಿರ್ಧರಿಸಿರುತ್ತದೆ. ಆದ್ದರಿಂದ ಈ ಆದೇಶ.

**ಆದೇಶ ಸಂಖ್ಯೆ:ಗ್ರಾಅಪ 04 ಇಎನ್‌ಕ್ಯೂ 17, ಬೆಂಗಳೂರು, ದಿನಾಂಕ:13.01.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಶ್ರೀ ಆರ್.ಎಂ.ಬಾಣದ್, ಹಿಂದಿನ ಉಪ ಯೋಜನ ವ್ಯವಸ್ಥಾಪಕರು, ಜಲ ನಿರ್ಮಲ ಯೋಜನೆ, ಜಿಲ್ಲಾ ಪಂಚಾಯತ್, ಕೊಪ್ಪಳ

(ಇವರು ದಿನಾಂಕ:31.12.2014 ರಂದು ಸೇವೆಯಿಂದ ವಯೋ ನಿವೃತ್ತಿ ಹೊಂದಿರುತ್ತಾರೆ) ಇವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ವಿವರವಾದ ಇಲಾಖೆ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು 1957 ರ ನಿಯಮ 11 ಮತ್ತು 11-ಎ ರಡಿ ನಡೆಸಲು ಕರ್ನಾಟಕ ನಾಗರೀಕ ಸೇವಾ ನಿಯಮ 214(2)(ಬಿ) ರಡಿ ಮಂಜೂರಾತಿ ನೀಡಿದೆ.

ಶ್ರೀ ಆರ್.ಎಂ.ಬಾಣದ್, ಹಿಂದಿನ ಉಪಯೋಜನ ವ್ಯವಸ್ಥಾಪಕರು, ಜಲ ನಿರ್ಮಲ ಯೋಜನೆ, ಜಿಲ್ಲಾ ಪಂಚಾಯತ್, ಕೊಪ್ಪಳ ಇವರನ್ನು ಒಳಗೊಂಡಂತೆ ಶ್ರೀ ರಮೇಶ್, ಕಿರಿಯ ಇಂಜಿನಿಯರ್, ಮತ್ತು ಶ್ರೀ ಯಮನಪ್ಪ ರಾಮತಾಳ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಇವರ ವಿರುದ್ಧದ ಆರೋಪಗಳಿಗೆ ಸಂಬಂದಿಸಿದಂತೆ ವಿವರವಾದ ಇಲಾಖಾ ವಿಚಾರಣೆಯನ್ನು ಕ.ನಾ.ಸೇ (ವ.ನಿ.ಮೇ) ನಿಯಮಗಳು 1957 ರ ನಿಯಮ 11 ರ ಅನುಸಾರ ನಡೆಸಲು ಪ್ರಕರಣವನ್ನು ನಿಯಮ 14-ಎ ರಡಿ ಮಾನ್ಯ ಉಪಲೋಕಾಯುಕ್ತ-1 ರವರಿಗೆ ವಹಿಸಿದೆ.

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಸಿದ್ದೇಶ ಪೊತ್ತಲಕಟ್ಟಿ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು,(ಲೆಕ್ಕ ಪತ್ರ 1&2)/(ಆಡಿಟ್) ಕರ್ನಾಟಕ, ಬೆಂಗಳೂರು.
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಛೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಅಪರ ನಿಬಂಧಕರು, ವಿಚಾರಣೆಗಳು-3, ಕರ್ನಾಟಕ ಲೋಕಾಯುಕ್ತ ಕಛೇರಿ, ಬಹುಮಹಡಿಗಳ ಕಟ್ಟಡ.
4. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೊಪ್ಪಳ
6. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು, ಕೆ.ಆರ್.ವೃತ್ತ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ, (ಸೇವೆಗಳು-ಎ ಮತ್ತು ಸಿ).
8. ಸಂಬಂಧಿಸಿದ ಅಧಿಕಾರಿ/ನೌಕರರಿಗೆ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕೊಪ್ಪಳ ರವರ ಮುಖಾಂತರ)
9. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರು
10. ಗ್ರಾ.ಅ.ಪಂ.ರಾಜ್ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ/ಕಾರ್ಯದರ್ಶಿ(ಪಂ.ರಾಜ್) /ಅಪರ ಕಾರ್ಯದರ್ಶಿ/ ಇವರ ಆಪ್ತ ಕಾರ್ಯದರ್ಶಿ/ಆಪ್ತ ಸಹಾಯಕರು
11. ಶಾಖಾ ರಕ್ಷಾ ಕಡತ/ಕಂಪ್ಯೂಟರ್ ಸೆಲ್/ ಹೆಚ್ಚುವರಿ ಪ್ರತಿ.